**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**C.C. - 35-24** **ಪಿಡಬ್ಲ್ಯೂ ಃ** **<u>8</u>**

**ಸಿಡಬ್ಲ್ಯೂ ಃ** **<u>12</u>**

ಸಾಕ್ಷಿದಾರರ ಹೆಸರು ಃ ಗೀತಾ ಬೀರಣ್ಣವರ

ಗಂಡನ ಹೆಸರು ಃ ಮುತ್ತು

ವಯಸ್ಸು ಃ 31 ವರ್ಷ

ಉದ್ಯೋಗ ಃ ವ್ಯಾಪಾರ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 25.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನನಗೆ ಮೃತ ಗರೀಬಪ್ಪ ಪರಿಚಯವಿಲ್ಲ. ನಾನು ಆರೋಪಿಯನ್ನು ನೋಡಿಲ್ಲ. ಹಾಗೂ ಅಪಘಾತ ವನ್ನು ಸಹ ನೋಡಿಲ್ಲ. ನಾನು ಹೇಳಿಕೆ ಹಾಗೂ ಮರು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದರು, ಅವರ ಮನವಿಯನ್ನು ಪರಿಗಣಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 2.11.2023 ರಂದು ರಾತ್ರಿ 9 ಗಂಟೆಗೆ ನಾನು ಮನೋಜ ಪಾರ್ಕ ಬಳಿ ನನ್ನ ಮೈಲಾರಲಿಂಗ ಗುಡಿಯ ಪಕ್ಕದಲ್ಲಿದ್ದ ನನ್ನ ಅಂಗಡಿಯಲ್ಲಿ ಕುಳಿತ್ತಿದ್ದಾಗ, ಆಟೋ ರಿಕ್ಷಾ ನಂಃ ಕೆಎ-63/-0933 ನೇದ್ದರ ಚಾಲಕನಾದ ನ್ಯಾಯಾಲಯದ ಮುಂದಿರುವ ಆರೋಪಿ ತನ್ನ ಆಟೋವನ್ನು ಸುಳ್ಳ ರೋಡ ರೇಲ್ವೆ ಬ್ರಿಡ್ಜ ಕಡೆಯಿಂದ ರಮೇಶ ಭವನದ ಕಡೆಗೆ ಅತಿ ವೇಗ ಹಾಗೂ ಅಜಾರೂಕತೆಯಿಂದ ಚಲಾಯಿಸಿಕೊಂಡು ಬಂದು, ಬಸವೇಶ್ವರ ಪಾರ್ಕ ಬಳಿ ತನ್ನ ರಿಕ್ಷಾದ ವೇಗ ನಿಯಂತ್ರಿಸಲಾಗದೇ ರೋಡ ದಾಟುತ್ತಿದ್ದ, ಗರೀಬಪ್ಪ ತಂದೆಃ ದುರ್ಗಪ್ಪ ಹರಿಜನ ರವರಿಗೆ ಡಿಕ್ಕಿಪಡಿಸಿ ರೋಡಿನಲ್ಲಿ ಕೆಡವಿ ಮೈಕೈಗಳಿಗೆ ಗಂಭೀರ ಸ್ವರೂಪದ ಗಾಯಪಡಿಸಿ ಉಪಚಾರ ಫಲಿಸದೇ ಮರಣಹೊಂದುವಂತೆ ಅಪಘಾತ ಪಡಿಸಿದ್ದಾನೆ ಅಂದರೆ ಸರಿಯಲ್ಲ.

ಈ ಕುರಿತು ನಾನು ನನಗೆ ಓದಿ ಹೇಳಿದಂತೆ ಹೇಳಿಕೆ ಹಾಗೂ ಮರು ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿ ಹೇಳಿಕೆ ವ ಮರು ಹೇಳಿಕೆ ಗಳನ್ನು ನಿಪಿ.19 ಹಾಗೂ 20 ಎಂದು ಗುರುತಿಸಲಾಯಿತು. ನನಗೆ ನಿಪಿ.19 ಹಾಗೂ 20 ರಲ್ಲಿರುವ ಎಲ್ಲಾ ಸಂಗತಿಗಳು ಗೊತ್ತಿದ್ದರೂ ಅಪಘಾತ ವ ಆರೋಪಿ ನೋಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಏನೂ ಇಲ್ಲ.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**C.C. - 35-24** **ಪಿಡಬ್ಲ್ಯೂ ಃ** **9**

**ಸಿಡಬ್ಲ್ಯೂ ಃ** **13**

ಸಾಕ್ಷಿದಾರರ ಹೆಸರು ಃ ಸಿದ್ದಲಿಂಗಪ್ಪ ಧಾರವಾಡ

ತಂದೆ / ಗಂಡನ ಹೆಸರು ಃ ವೀರಪ್ಪ

ವಯಸ್ಸು ಃ 47 ವರ್ಷ

ಉದ್ಯೋಗ ಃ ಮುಖ್ಯ ಪೇದೆ

ವಾಸಸ್ಥಳ ಃ ಗೋಕುಲ ರೋಡ, ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 25.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು 2021 ರಿಂದ 2025 ವರೆಗೆ ಪೂರ್ವ ಸಂಚಾರಿ ಪೋಲಿಸ ಠಾಣೆ ಮುಖ್ಯ ಪೇದೆ ಅಂತಾ ಸೇವೆ ಸಲ್ಲಿಸಿದ್ದೇನೆ.

ಈ ಪ್ರಕರಣದ ತನಿಖಾಧಿಕಾರಿ ಚಾಸಾ-17 ದಿಃ 4.11.2023 ರಂದು ಆಟೋ ರಿಕ್ಷಾ ನಂಃ ಕೆಎ-63 / 0933 ಅಪಘಾತ ಪಡಿಸಿ ಪರಾರಿಯಾಗಿದೆ, ಪತ್ತೆ ಹಚ್ಚುವಂತೆ ಜ್ಞಾಪನಾ ಪತ್ರ ನೀಡಿದ್ದಾರೆ. ಸದರಿ ಜ್ಞಾಪನಾ ಪತ್ರವನ್ನು ನಿಪಿ.21 ಎಂದು ಗುರುತಿಸಲಾಯಿತು. ನಂತರ ಕಿತ್ತೂರ ಚನ್ನಮ್ಮ ಸರ್ಕಲ್, ಕಮರಿಪೇಟ, ಎಲ್ಲಿ ಆಟೋ ನಿಲ್ದಾಣಗಳು ಇವೆ ಅಲ್ಲಿ ನೋಡಿಕೊಂಡು ಗದಗ ರೋಡನ ರೇಲ್ವೆ ಕಲ್ಯಾಣ ಕೇಂದ್ರದ ಬಳಿ ಬಂದಾಗ ಸದರಿ ಆಟೋ ನಿಂತಿದ್ದು, ಒಬ್ಬ ಆಟೋ ಚಾಲಕನ ಸಹಾಯದಿಂದ ನಾನು ಆಟೋ ತೆಗೆದುಕೊಂಡು ಬಂದು, ತನಿಖಾಧಿಕಾರಿ ಮುಂದೆ ಹಾಜರಪಡಿಸಿದ್ದೇನೆ. ಈ ಕುರಿತು ವರದಿ ನೀಡಿದ್ದು ಅದನ್ನು ನಿಪಿ.22 ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.2 ರಲ್ಲಿರುವ ಆಟೋ ನೋಡಿ ಗುರುತಿಸಿದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ವಿ ಎಸ್, ವಕೀಲರಿಂದಃ**

ನಾನು ಇಲಾಖೆಯಲ್ಲಿ 21 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಸಾಮಾನ್ಯವಾಗಿ ಅಪರಾಧ ಮಾಡಿದವರು ಮುಮಾ- ಗಳನ್ನು ಬಚ್ಚಿಡುತ್ತಾರೆ ಅಂದರೆ ಗೊತ್ತಿಲ್ಲ.

ಮಾಲಿಕನು ಪತ್ತೆ ಹಚ್ಚಲು ತನಿಖಾಧಿಕಾರಿ ಹೇಳಿಲ್ಲ. ದಿಃ 4.11.2023 ರಂದು ಆಟೋ ಪತ್ತೆಯಾಗಿದೆ. ಸಮಯ ನೆನಪಿಲ್ಲ. ನಿಜವಾಗಿ ಪತ್ತೆ ಮಾಡಿದರೆ ಸಮಯ ಗೊತ್ತಾಗುತ್ತದೆ ಅಂದರೆ ಸರಿಯಲ್ಲ. ನಾನು ಆಟೋ ಪತ್ತೆ ಮಾಡಿಲ್ಲ ಅಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.